**ಅಪರ** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ

ನ್ಯಾಯಾಲಯ, ಆಳಂದ.

**ಸಿ.ಸಿ.ನಂಃ 34/2021** ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ರೇಣುಕಾ |
| ತಂದೆಃಗಂಡ | ಃ | ನಾಗಪ್ಪ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | : | ಆಶಾ ಕಾರ್ಯಕರ್ತೆ |
| ವಾಸಸ್ಥಳ | ಃ | ಕಿಣ್ಣಿ ಅಬ್ಬಾಸ |

ದಿನಾಂಕಃ20.06.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-6 ನನ್ನ ಗಂಡ, ಚಸಾ-2 ರಿಂದ 5 ರವರ ಪರಿಚಯ ಇರುತ್ತದೆ. ದಿ.20.05 ರಂದು ಸಂಜೆ 6.30 ಗಂಟೆಗೆ ಚಾಸಾ-4 ರವರನ್ನು ವಿಚಾರಿಸಲು ಹೋದಾಗ ಪೂಣೆ ಮುಂಬಯಿಯಿಂದ ಬಂದವರನ್ನು ಕ್ವಾರಂಟೈನಲ್ಲಿ ಇಡಲು ಮುಂಚಿತವಾಗಿ ವಿಚಾರಿಸಲು ಹೋಗಿದ್ದೇನು. 1 ನೇ ಆರೋಪಿ ನನ್ನನ್ನು " ಎ ಆಶಾ ನಿಲ್ಲು ಎಂದು " ನಿಂತಾಗ 1 ನೇ ಆರೋಪಿ ನನ್ನನ್ನು ಕ್ವಾರಂಟೈನನಲ್ಲಿ ಇಟ್ಟಿದ್ದಿರಾ ಆದರೆ ಇಲ್ಲಿ ಮಾಂಸಾಹಾರ ಹಾಗೂ ಹಾಲು ಚಿಪ್ಸ ಸಿಗುವುದಿಲ್ಲ ಎಂದು ಹೇಳಿದರು. ಇವನ್ನೆಲ್ಲ ನೀಡಲು ನನಗೆ ಅಧಿಕಾರ ಇರುವುದಿಲ್ಲ ನಾಳೆ ಪಿಡಿಓರವರು ಬರುತ್ತಾರೆ ಆಗ ಅವರನ್ನು ಕೇಳಿ ಎಂದು ಹೇಳಿದೇನು. ಪಿಡಿಓ ರವರನ್ನು ಕೇಳಲು ನೀನ್ಯಾಕೆ ನನ್ನನ್ನು ಇಲ್ಲಿ ಇಟ್ಟಿದ್ದಿಯಾ ಎಂದು " ಎ ರಂಡಿ ಮಗಳಾ " ಎಂದು ಬೈದರು. ಈ ರೀತಿ ಬೈಯ್ಯುವುದು ಸರಿಯಲ್ಲ ಎಂದು ತಿಳಿಸಿದಾಗ 2 ನೇ ಆರೋಪಿ ನನ್ನ ಕೂದಲು ಹಿಡಿದು ನೆಲಕ್ಕೆ ಕೆಡವಿದರು. 3 ರಿಂದ 5 ನೇ ಆರೋಪಿಗಳು ಅವರ ಮನೆಯಿಂದ ಓಡಿ ಬಂದರು. 5 ನೇ ಆರೊಪಿ ಕಲ್ಲು ತೆಗೆದುಕೊಂಡು ನನ್ನ ಎದೆಯ ಮೇಲೆ ಬಿಸಾಕಿದನು. ನಾನು ಚೀರಾಡುವಾಗ ಎಲ್ಲ ಅರೋಪಿತರು ನನ್ನನ್ನು ಹೊಡೆಯುತ್ತಿದ್ದರು ಆಗ ನಾನು ಪ್ರಜ್ಞೆ ತಪ್ಪಿ ಬಿದ್ದೇನು. ಚಾಸಾ-5 ರವರು ನೀರು ಚಿಮುಕಿಸಿದಾಗ ನನಗೆ ಎಚ್ಚರವಾಯಿತು. ನನ್ನ ಗಂಡ ಪಿಎಸಐರವರಿಗೆ ಕರೆ ಮಾಡಿ ತಿಳಿಸಿದಾಗ ಅವರು ಸ್ಥಳಕ್ಕೆ ಬಂದು ನಾನು ನನ್ನ ಗಂಡ ದ್ವಿಚಕ್ರವಾಹನದ ಮೇಲೆ ಮತ್ತೇ ತಲೆ ತಿರುಗಿ ನಾನು ಬಿದ್ದೆ ಆಗ ಪಿಎಸಐರವರು ಅಂಬುಲೆನ್ಸ ಕರೆಯಿಸಿ ನನ್ನನ್ನು ಆಸ್ಪತ್ರೆಗೆ ಕಳುಹಿಸಿದರು. ಮರುದಿನ 21 ನೇ ತಾರೀಖಿನಂದು ಬೆಳಗ್ಗೆ ಮಾದನ ಹಿಪ್ಪರಗಾ ಪೋಲಿಸ ಠಾಣೆಗೆ ಹೋಗಿ ಫಿರ್ಯಾದಿ ದಾಖಲಿಸಿರುತ್ತೇನೆ. ಸಾಕ್ಷಿಗೆ ಈಗ ಅವರು ನೀಡಿರುವ ದೂರನ್ನು ತೋರಿಸಿ ಸದರಲ್ಲಿರುವ ಸಹಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನುನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಕಲ್ಲನ್ನು ತೋರಿಸಿ ಅದನ್ನು ಗುರುತಿಸಿದ್ದು ಸದರಿ ಕಲ್ಲನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಗಳ ಪರ ಎಸ.ಎಸ.ಸಿ. ವಕೀಲರಿಂದ.**

ನಾನು ಬಿ.ಎ.ಬಿ.ಎಡ್. ಕಲಿತಿರುತ್ತೇನೆ. ನನ್ನ ಗಂಡನ ಮನೆ ನಿರಗುಡಿ. ನನಗೆ ಮದುವೆ ಆಗಿ ಮೂರು ವರ್ಷ ಅಗಿರುತ್ತದೆ. ದೂರನ್ನು ನೀಡಿದಾಗ ನನಗೆ ಮದುವೆ ಆಗಿತ್ತು. ನಾನು ದೂರು ನೀಡುವಾಗ ನನ್ನ ತಂದೆಯ ಹೆಸರು ಇರುತ್ತದೆ ಎಂದರೆ ಸಾಕ್ಷಿ ನಾನು ಆಷಾ ಕಾರ್ಯಕರ್ತೆಯಾದಾಗ ನನ್ನ ತಂದೆಯ ಹೆಸರು ಇರುತ್ತದೆ ಅದರ ಆಧಾರದ ಮೇಲೆ ದೂರು ನೀಡುವಾಗ ನನ್ನ ತಂದೆಯ ಹೆಸರು ಬರೆದಿರುತ್ತಾರೆ ಎಂದು ಹೇಳುತ್ತಾರೆ. ನಾನು ಈಗಲೂ ಆಶಾ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಇಂದು ಪ್ರಕರಣ ಇದ್ದ ಕಾರಣ ಕರ್ತವ್ಯಕ್ಕೆ ಹಾಜರಾಗದೇ ಬಂದಿರುತ್ತೇನೆ. ಆಶಾ ಕಾರ್ಯಕರ್ತೆಯರಿಗೆ ಗುಲಾಬಿ ಬಣ್ಣದ ಸೀರೆ ಸಮವಸ್ತ್ರ ಇರುತ್ತದೆ. ನಾನು ಆಶಾ ಕಾರ್ಯಕರ್ತೆಯಾಗಿ **12** ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ನನಗೆ ಆಶಾ ಕಾರ್ಯಕರ್ತೆಯಾಗಿ **2017** ರಲ್ಲಿ ಆದೇಶ ಬಂದಿರುತ್ತದೆ. ಸದರಿ ಆದೇಶದ ಪ್ರತಿಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ನನಗಿಂತಲೂ ಮೊದಲು ನನ್ನ ತಂಗಿ ಶರಣಮ್ಮರವರು ಆಶಾ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಶರಣಮ್ಮರವರಿಗೆ ಸರಸಂಬಾ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಅವರ ಮದುವೆ ಆದ ನಂತರ ಅವರ ಕೆಲಸವನ್ನು ಅವರ ಹೆಸರಿನ ಮೇಲೆ ಕೆಲವು ದಿನಗಳ ಕಾಲ ನಾನು ಮಾಡಿರುತ್ತೇನೆ ಎಂದರ ಸರಿಯಲ್ಲ. ಕ್ವಾರಂಟೈನ ಸೆಂಟರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಿಣ್ಣಿ ಅಬ್ಬಾಸರಲ್ಲಿ ಇತ್ತು. ನನ್ನ ದೂರಿನಲ್ಲಿ ಈ ವಿಚಾರ ಬರೆದಿರುವುದಿಲ್ಲ. ನನ್ನ ದೂರಿನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಸದರಿ ಕ್ವಾರಂಟೈನ ಸೆಂಟರ ನಮ್ಮೂರಿನ ಪೂರ್ವ ದಿಕ್ಕಿಗೆ ಇರುತ್ತದೆ. ಕಿಣ್ಣಿ ಅಬ್ಬಾಸ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕ್ವಾರಂಟೈನ ಸೆಂಟರ ಆಗಿತ್ತು ಎಂದು ಪೋಲಿಸರಿಗೆ ಜಿಲ್ಲಾಧಿಕಾರಿ ಆದೇಶವನ್ನು ನಾನು ನೀಡಿರುವುದಿಲ್ಲ. ದಿ.**20.05.** ರಂದು ಸದರಿ ಶಾಲಯಲ್ಲಿ **45** ಜನ ಕ್ವಾರಂಟೈನ ಇದ್ದರು. ಬಾಬು, ಭೀಮಶಾ, ಲಕ್ಷಣ ಭೀಮಶಾ ನಿಂಬಾಳ, ಗೌತಮ ಭಿಮಶಾ ನಿಂಬಾಳ, ರೇಣುಕಾ ಗೌತಮ ನಿಂಬಾಳ, ಶರಣಮ್ಮ ಬಾಬು ನಿಂಬಾಳ ಇಮರ ಪುಣೆಯಿಂದ ಬಂದಿದ್ದರು. ಉಳಿದವರ ಹೆಸರು ಗೊತ್ತಿರುವುದಿಲ್ಲ. ಸರ್ಕಾರದ ಆದೇಶ ಇಬ್ಬರು ವ್ಯಕ್ತಿಗಳು **3** ರಿಂದ **4** ಅಡಿ ಅಂತರದಲ್ಲಿ ನಿಂತು ಮಾತನಾಡಬೇಕು ಎಂದು ಇತ್ತು ಎಂದರೆ ಸರಿ. ಸದರಿ **45** ಜನರ ಯಾದಿಯನ್ನು ಪೋಲಿಸರಿಗೆ ನೀಡಿರುವುದಿಲ್ಲ. ಚಾಸಾ-**4** ರವರು ಪುಣೆಯಿಂದ ಬಂದಿದ್ದರು. ನಾವು ಪ್ರತಿದಿನ ಕ್ವಾರಂಟೈನ ಇದ್ದವರು ಪಟ್ಟಿಯನ್ನು ರಾತ್ರಿ ಕಳುಹಿಸುತ್ತಿದ್ದೇವು ಆದರೆ ಘಟನೆ ನಡೆದಿದ್ದು ಮದ್ಯಾಹ್ನ ನಡೆದ ಕಾರಣ ಆ ದಿನ ಪಟ್ಟಿಯನ್ನು ಕಳುಹಿಸಿರಲಿಲ್ಲ ಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ಚಾಸಾ-**4** ರವರ ಮಾಹಿತಿಯನ್ನು ನಾನು ಪೋಲಿಸರಿಗೆ ನೀಡಿರುವುದಿಲ್ಲ. ನಾನು **15** ದಿನಗಳ ಕಾಲ ದಾಖಲು ಇದ್ದೇನು. ಆರೋಪಿ ಅವನ ಇಬ್ಬರು ಮಕ್ಕಳು ಹಾಗೂ ಹೆಂಡತಿ ಪೂಣೆಯಿಂದ ಬಂದಿದ್ದರು. ಆರೋಪಿತರು **19** ನೇ ತಾರೀಖಿನಂದು ಬೆಳಗ್ಗೆ ಬಂದಿದ್ದರು. ಸರ್ಕಾರದಿಂದ ವ್ಯಕ್ತಿ ಯಾವ ದಿನದಂದು ಊರಿನಿಂದ ಬಂದಿರುತ್ತಾನೆ ಅದೇ ದಿನ ಕ್ವಾರಂಟೈನ ಮಾಡಬೇಕು ಎಂಬ ಆದೇಶ ಇತು ಎಂದರೆ ಸರಿ. ಆರೋಪಿಯನ್ನು **19** ನೇ ತಾರಿಖಿನಂದೇ ಬೆಳಗ್ಗೆ ಕ್ವಾರಂಟೈನ ಮಾಡಿರುತ್ತೇನೆ. ಆರೋಪಿಯನ್ನು **19** ನೇ ತಾರಿಖಿಂದೇ ಕ್ವಾರಂಟೈನ ಮಾಡಿರುತ್ತೇನೆ ಎಂದು ಬರೆದಿರುವುದಿಲ್ಲ. ಜಗಳ **40** ನಿಮಿಷಗಳ ಕಾಲ ನಡೆಯಿತು. ಜಗಳ ನಡೆಯುವಾಗ ಕ್ವಾರಂಟೈನಲ್ಲಿ ಇದ್ದವರು ಅವರ ಕೋಣೆಯಿಂದಲೇ ನೋಡುತ್ತಿದ್ದರು ಯಾರು ಬಂದು ಬಿಡಿಸಿರುವುದಿಲ್ಲ. ಕ್ವಾರಂಟೈನನ ಜನರನ್ನು ಹೊರತು ಬೇರೆ ಯಾರು ಇರಲಿಲ್ಲ. ಕ್ವಾರಂಟಿನ ಕೇಂದ್ರದಿಂದ ಆರೋಪಿತರ ಮನೆ **10-15** ಅಡಿ ಅಂತರದಲ್ಲಿ ಇದೆ. ನನ್ನ ದೂರಿನಲ್ಲಿ **3** ರಂದ **5** ನೇ ಆರೋಪಿತರು ಅವರ ಮನೆಯಿಂದ ಓಡಿ ಬಂದು ಹೊಡೆದರು ಎಂದು ಬರೆಯಿಸಿರುತ್ತೇನೆ. **2** ನೇ ಆರೋಪಿ ತನ್ನ ಕೂದಲು ಹಿಡಿದು ಜಗ್ಗಾಡಿದರು ಎಂದು ನನ್ನ ದೂರಿನಲ್ಲಿ ಬರೆಯಿಸಿರುತ್ತೇನೆ. **5** ನೇ ಆರೋಪಿ ಕಲ್ಲಿನಿಂದ ಜಜ್ಜಿರುತ್ತಾನೆ ಎಂದು ನನ್ನ ದೂರಿನಲ್ಲಿ ಬರೆಯಿಸಿರುತ್ತೇನೆ. ಚಾಸಾ-**5** ರವರು ಘಟನೆ ನಡೆಯುವಾಗ ಅಡುಗೆ ಕೋಣೆಯಲ್ಲಿ ಅಡುಗೆ ಮಾಡುತ್ತಿದ್ದರು. ಘಟನೆ ನಡೆದ ಸಮಯದಲ್ಲಿ ದಶರಥ ಪಾತ್ರೆರವರು ಗ್ರಾಮ ಪಂಚಾಯತಿ ಪಿಡಿಓ ಇದ್ದರು. ಪಿಡಿಓರವರು ಕ್ವಾರಂಟಿನ ಸೆಂಟರಗಳಿಗೆ ಭೇಟಿ ನೀಡುವ ಕರ್ತವ್ಯ ಇತ್ತು ಎಂದರೆ ಸರಿ. ಘಟನೆ ನಡೆದ ದಿನದಂದು ಪಿಡಿಓರವರು ಜಗಳವಾದ ನಂತರ ಬಂದಿದ್ದರು. ನಾನು ಪಿಡಿಓರವರಿಗೆ ಘಟನೆಯ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಪಂಪ ಆಪರೇಟರ ಈ ವಿಚಾರವನ್ನು ತಿಳಿಸಿರುತ್ತಾರೆ. ಘಟನೆ ಆದ ನಂತರ ಪಿಎಸಐರವರು ಸ್ಥಳಕ್ಕೆ

ಬಂದಿದ್ದರು. ಪಿಎಸಐರವರು ಅದೇ ದಿನ ಸ್ಥಳಕ್ಕೆ ಬಂದಾಗ ದೂರನ್ನು ತೆಗೆದುಕೊಂಡಿರುವುದಿಲ್ಲ. ಪಿಎಸಐರವರು ಸಂಜೆ **7.30** ಗಂಟೆಗೆ ಘಟನಾ ಸ್ಥಳಕ್ಕೆ ಬಂದರು. ಆ ಸಮಯದಲ್ಲಿ ನನ್ನ ಗಂಡನು ನನ್ನ ಜೊತೆ ಇದ್ದನು. ನಾನು ದ್ವಿಚಕ್ರ ವಾಹನದಲ್ಲಿ ಹೋಗುವಾಗ ಮತ್ತೇ ಆಯತಪ್ಪಿ ಬಿದ್ದೇನು ಎಂದು ನನ್ನ ದೂರಿನಲ್ಲಿ ಬರೆಯಿಸಿರುತ್ತೇನೆ. ಪಿಎಸಐರವರು ಅಂಬುಲೆನ್ಸ ಕರೆಯಿಸಿ ಆಸ್ಪತ್ರೆಗೆ ಕಳುಹಿಸಿದರು ಎಂದು ದೂರಿನಲ್ಲಿ ಬರೆಯಿಸಿರುತ್ತೇನೆ. ನಮ್ಮ ಊರಿನಿಂದ ಅಂಬುಲೆನ್ಸನಲ್ಲಿ **8.15** ಗಂಟೆಗೆ ಹೊರೆಟೆವು. ಕಿಣ್ಣಿ ಅಬ್ಬಾಸದಿಂದ ಮೋಘಾ(ಬಿ) ಮಾರ್ಗವಾಗಿ ಬಂದರೆ **18** ಕಿ.ಮಿ. ಸರಸಂಬಾ ಮಾರ್ಗವಾಗಿ ಬಂದರೆ **25** ಕಿ.ಮಿ. ಅಂತರದಲ್ಲಿ ಅಳಂದ ಇರುತ್ತದೆ. ಘಟನೆ ನಡೆದ ದಿನ ಸರಸಂಬಾ ಮಾರ್ಗದಿಂದ ಆಳಂದಕ್ಕೆ ಬಂದೇನು. ಕಿಣ್ಣಿ ಅಬ್ಬಾಸದಿಂದ ಸರಸಂಬಾವರೆಗೂ ಕಚ್ಚಾ ರಸ್ತೆ ಇದೆ ಎಂದರೆ ಸರಿ. ಕಚ್ಚಾ ರಸ್ತೆ ಇದ್ದ ಕಾರಣ ಒಂದು ಗಂಟೆಗಳ ಕಾಲ ಆಳಂದ ತಲುಪಲು ಬೇಕಾಗುತ್ತದೆ ಎಂದರೆ ಸರಿ. ಆಳಂದ ಅಸ್ಪತ್ರೆಗೆ **9.30** ಗಂಟೆಗೆ ತಲುಪಿದೇವು. ನಾನು ಜೆಎನಎಂ ನರ್ಸಿಂಗ ಕಲಿತಿದ್ದೇನೆ ಎಂದರೆ ಸರಿ. ನನಗೆ ವೈದ್ಯಕೀಯ ಭಾಷೆ ಅರ್ಥವಾಗುತ್ತದೆ. ಆಸ್ಪತ್ರೆಯಲ್ಲಿ ನನ್ನ ಚಿಕಿತ್ಸೆ ಶುರುವಾದ ಸಮಯ ನನಗೆ ನೆನಪಿಲ್ಲ. ವೈದ್ಯರು ನನಗೆ ಏನಾಗಿದೆ ಎಂದು ವಿಚಾರಿಸಿದರು ಎಂದರೆ ಸರಿ. ನನ್ನ ಮೇಲೆ ಹಲ್ಲೆಯಾಗಿದೆ ಎಂದು ಹೇಳಿದ ನಂತರ ವೈದ್ಯರು ಚಿಕಿತ್ಸೆ ಶುರುಮಾಡಿದರು. ವೈದ್ಯರು ನಾನು ಹೇಳಿದ ನಂತರ ಪೋಲಿಸರನ್ನು ಕರೆಯಿಸಿ ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ. ವೈದ್ಯರಿಗೆ ಬಳೆ ತೆರಚಿದ ಕಾರಣ ರಕ್ತಗಾಯವಾಗಿದೆ ಎಂದು ಹೇಳಿದ್ದೆ ಎಂದರೆ ಸರಿ. ರಕ್ತದ ಕಲೆಗಳು ನನ್ನ ಬಟ್ಟೆಗೆ ಹತ್ತಿದ್ದವು ಎಂದರೆ ಸರಿ. ಪೋಲಿಸರು ರಕ್ತದ ಕಲೆಗಳಾದ ಬಟ್ಟೆಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಆಸ್ಪತ್ರೆಯಲ್ಲಿ ಮೂರು ದಿನಗಳ ಕಾಲ ದಾಖಲಿದ್ದು ನಂತರ ಕ್ವಾರಂಟೈನ ಇದ್ದೇನು. ಮುರಾರ್ಜಿ ಶಾಲೆಯಲ್ಲಿ ಕ್ವಾರಂಟೈನ ಇದ್ದೇನು. ಆಸ್ಪತ್ರೆಯಿಂದ ನೇರವಾಗಿ ಮುರಾರ್ಜಿ ಶಾಲೆಗೆ **12** ದಿನಗಳ ಕಾಲ ಕ್ವಾರಂಟೈನ ಆಗಲು ಹೋಗಿದ್ದೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಹಾಗೂ ಕ್ವಾರಂಟೈನ ಇದ್ದಾಗ ಪೋಲಿಸರು ಬಂದು ನನ್ನ ಹೇಳಿಕೆ ಪಡೆದಿರುವುದಿಲ್ಲ. ನಾನು ಪೋಲಿಸರಿಗೆ ನನ್ನ ದೂರನ್ನು ಕೈಯಿಂದ ಬರೆದು ಕೊಟ್ಟಿರುತ್ತೇನೆ. ಸಾಕ್ಷಿಗೆ ನಿಪಿ-**1** ಗಣಕೀಕೃತ ಇರುತ್ತದೆ ಆದರೆ ನೀವು ಕೈಯಿಂದ ಬರೆದು ಕೊಟ್ಟಿರುತ್ತೇವೆ ಎಂದು ಹೇಳಿದ್ದಿರಾ ಯಾವುದು ನಿಜ ಎಂದರೆ ಸಾಕ್ಷಿ ನಾನು ಕೈಯಿಂದ ಬರೆದು ಕಂಪ್ಯೂಟರ ಟೈಪ ಮಾಡಿ ಕೊಟ್ಟಿರುತ್ತಾರೆ ಎಂದು ಹೇಳಿರುತ್ತಾರೆ. ಮಾದನ ಹಿಪ್ಪರಗಾದಲ್ಲಿ ಟೈಪ ಮಾಡಿಸಿರುತ್ತೇನೆ. ಪೋಲಿಸ ಠಾಣೆಯಲ್ಲೇ ಟೈಪ ಮಾಡಿಸಿರುತ್ತೇನೆ. ಪ್ರ.ವ.ವ.ಯಲ್ಲಿ ಟೈಪ ಮಾಡಿದ ದೂರಿನ ಆಧಾರದ ಮೇಲೆ ಎಂದು ಬರೆದಿರುತ್ತದೆ ಅದ ಕಾರಣ ನಾನು ಮಾದನ ಹಿಪ್ಪರಗಾ ಠಾಣೆಯಲ್ಲಿ ಟೈಪ ಮಾಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಮಾದನ ಹಿಪ್ಪರಗಾ ಠಾಣೆಯಲ್ಲೇ ಟೈಪ ಮಾಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಹಾಗೂ ಆರೋಪಿತರು ಒಂದೇ ಸಮಾಜದವರು ಎಂದರೆ ಸರಿ. ನನಗೂ ಆರೋಪಿತರಿಗೂ ಮುಂಚೆಯಿಂದ ಮನಸ್ಥಾಪ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿತರಿಗೂ ನನಗೂ ದ್ವೇಷವಿದ್ದ ಕಾರಣ ಕ್ವಾರಂಟೀನ ಸೆಂಟರ ದುರುಪಯೋಗ ತೆಗೆದುಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರ ಸರಿಯಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮು.ಮಾ.**1** ಇರುವಂತಹ ಕಲ್ಲುಗಳು ಸಿಗುತ್ತವೆ ಎಂದರೆ ಸರಿ.

ದಿ.20.05 ರಂದು ಸಂಜೆ 6.30 ಗಂಟೆಗೆ ಚಾಸಾ-4 ರವರನ್ನು ವಿಚಾರಿಸಲು ಹೋದಾಗ ಪೂಣೆ ಮುಂಬಯಿಯಿಂದ ಬಂದವರನ್ನು ಕ್ವಾರಂಟೈನಲ್ಲಿ ಇಡಲು ಮುಂಚಿತವಾಗಿ ವಿಚಾರಿಸಲು ಹೋಗಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನ್ನನ್ನು " ಎ ಆಶಾ ನಿಲ್ಲು ಎಂದು " ನಿಂತಾಗ 1 ನೇ ಆರೋಪಿ ನನ್ನನ್ನು ಕ್ವಾರಂಟೈನನಲ್ಲಿ ಇಟ್ಟಿದ್ದಿರಾ ಆದರೆ ಇಲ್ಲಿ ಮಾಂಸಾಹಾರ ಹಾಗೂ ಹಾಲು ಚಿಪ್ಸ ಸಿಗುವುದಿಲ್ಲ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇವನ್ನೆಲ್ಲ ನೀಡಲು ನನಗೆ ಅಧಿಕಾರ ಇರುವುದಿಲ್ಲ ನಾಳೆ ಪಿಡಿಓರವರು ಬರುತ್ತಾರೆ ಆಗ ಅವರನ್ನು ಕೇಳಿ ಎಂದು ಹೇಳಿದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಿಡಿಓ ರವರನ್ನು ಕೇಳಲು ನೀನ್ಯಾಕೆ ನನ್ನನ್ನು ಇಲ್ಲಿ ಇಟ್ಟಿದ್ದಿಯಾ ಎಂದು " ಎ ರಂಡಿ ಮಗಳಾ " ಎಂದು ಬೈದರು. ಈ ರೀತಿ ಬೈಯ್ಯುವುದು ಸರಿಯಲ್ಲ ಎಂದು ತಿಳಿಸಿದಾಗ 2 ನೇ ಆರೋಪಿ ನನ್ನ ಕೂದಲು ಹಿಡಿದು ನೆಲಕ್ಕೆ ಕೆಡವಿದರು

ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ರಿಂದ 5 ನೇ ಆರೋಪಿಗಳು ಅವರ ಮನೆಯಿಂದ ಓಡಿ ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಆರೊಪಿ ಕಲ್ಲು ತೆಗೆದುಕೊಂಡು ನನ್ನ ಎದೆಯ ಮೇಲೆ ಬಿಸಾಕಿದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚೀರಾಡುವಾಗ ಎಲ್ಲ ಅರೋಪಿತರು ನನ್ನನ್ನು ಹೊಡೆಯುತ್ತಿದ್ದರು ಆಗ ನಾನು ಪ್ರಜ್ಞೆ ತಪ್ಪಿ ಬಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-5 ರವರು ನೀರು ಚಿಮುಕಿಸಿದಾಗ ನನಗೆ ಎಚ್ಚರವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಪಿಎಸಐರವರಿಗೆ ಕರೆ ಮಾಡಿ ತಿಳಿಸಿದಾಗ ಅವರು ಸ್ಥಳಕ್ಕೆ ಬಂದು ನಾನು ನನ್ನ ಗಂಡ ದ್ವಿಚಕ್ರವಾಹನದ ಮೇಲೆ ಮತ್ತೇ ತಲೆ ತಿರುಗಿ ನಾನು ಬಿದ್ದೆ ಆಗ ಪಿಎಸಐರವರು ಅಂಬುಲೆನ್ಸ ಕರೆಯಿಸಿ ನನ್ನನ್ನು ಆಸ್ಪತ್ರೆಗೆ ಕಳುಹಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರುದಿನ 21 ನೇ ತಾರೀಖಿನಂದು ಬೆಳಗ್ಗೆ ಮಾದನ ಹಿಪ್ಪರಗಾ ಪೋಲಿಸ ಠಾಣೆಗೆ ಹೋಗಿ ಫಿರ್ಯಾದಿ ದಾಖಲಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.